## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 140/2014 ಪಿ.ಡಬ್ಲ್ಯೂಃ 6

ಸಿಡಬ್ಲೂಃ 4

ಸಾಕ್ಷಿದಾರರ ಹೆಸರು : ಬಾಲಾಜಿ

ತಂದೆಯ ಹೆಸರು : ವಿಶ್ವನಾಥ ನಾಯ್ಕ

ವಯಸ್ಸು : 63 ವರ್ಷ

ಉದ್ಯೋಗ : ಖಾಸಗೀ ಕೆಲಸ

ವಾಸ್ತವ್ಯ : ಅಸ್ನೋಟಿ , ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 26-07-2022

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಈಗ ನಿಪಿ.3 ನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.3 ಬಿ ಎಂದು ಗುರುತಿಸಲಾಯಿತು. 01.09.2008 ರಂದು ನಾನು ನಿಪಿ.3 ಕ್ಕೆ ಚಾಸಾ.1 ರವರ ಮನೆಯಲ್ಲಿ ಕಳ್ಳತನ ಆಗಿದ್ದರಿಂದ ಪಂಚನಾಮೆಯನ್ನು ಪೋಲೀಸ ಠಾಣೆಯಲ್ಲಿ ಮಾಡಲಾಯಿತು. ಪಂಚನಾಮೆ ಯಾವಾಗ ಮಾಡಲಾಯಿತು ನನಗೆ ನೆನಪಿಲ್ಲಾ.

2. ಈಗ ನಿಪಿ.4 ನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.4 ಬಿ ಎಂದು ಗುರುತಿಸಲಾಯಿತು. 02.09.2008 ರಂದು ನಿಪಿ.4 ಕ್ಕೆ ಪೋಲೀಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಮತ್ತು ಯಾವ ಸಮಯದಲ್ಲಿ ಪಂಚನಾಮೆ ಮಾಡಲಾಯಿತು ನನಗೆ ನೆನಪಿಲ್ಲಾ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಪಿಪಿ ರವರಿಂದ**

3. ದಿನಾಂಕಃ 01.12.2008 ರಂದು ನಿಪಿ.3 ಕ್ಕೆ ಚಿತ್ತಾಕುಲಾ ಪೋಲೀಸರ ವಶದಲ್ಲಿದ್ದ ಆರೋಪಿ 1 ತಾನು ಕಳ್ಳತನ ಮಾಡಿದ ಮನೆಯನ್ನು ತೋರಿಸುತ್ತೇನೆಂದು ಹೇಳಿ ನಮ್ಮನ್ನು ಹಾಗೂ ಪೋಲೀಸರನ್ನು ಘಟನಾ

ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಲಾಗಿ ಅಲ್ಲಿ ಪಂಚನಾಮೆಯನ್ನು 5.30 ರಿಂದ 6.15ರ ವರೆಗೆ ಮಾಡಲಾಯಿತು ಮತ್ತು ನಾನು ಅಲ್ಲೇ ಘಟನಾ ಸ್ಥಳದಲ್ಲಿ ನಿಪಿ.3 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ.

4. ದಿನಾಂಕಃ 02.12.2008 ರಂದು ನಿಪಿ.4 ಕ್ಕೆ ಆರೋಪಿತನು ತಾನು ಕದ್ದ ಒಡವೆಗಳನ್ನು ಮುಂಡಗೋಡದ ಆಭರಣ ಅಂಗಡಿಯಲ್ಲಿ ಮಾರಾಟ ಮಾಡಿದ್ದು, ಸದರಿ ಅಂಗಡಿಯನ್ನು ತೋರಿಸುತ್ತೇನೆಂದು ಹೇಳಿ ನಾವು ಹಾಗೂ ಪೋಲೀಸರು ಚಿತ್ತಾಕುಲಾ ಪೋಲೀಸ ಠಾಣೆಯಿಂದ ಬೆಳಿಗ್ಗೆ 5 ಗಂಟೆಗೆ ಹೊರಟು 9.30 ಕ್ಕೆ ಮುಂಡಗೋಡಕ್ಕೆ ತಲುಪಿ ಅಲ್ಲಿ ಆರೋಪಿ ತೋರಿಸಿದ ಬಂಗಾರದ ಆಭರಣದ ಅಂಗಡಿಯಲ್ಲಿ ಒಂದು ಬಂಗಾರದ ನೆಕಲೇಸ್ , ಒಂದು ಬಂಗಾರದ ಉಂಗುರ, ಎರಡು ಬಂಗಾರದ ಕಿವಿಯೋಲೆ ಜಪ್ತು ಪಡಿಸಿಕೊಂಡು ಸ್ಥಳದಲ್ಲೇ 10.00 ರಿಂದ 11.15ರ ವರೆಗೆ ಪಂಚನಾಮೆ ಬರೆಯಲಾಯಿತು, ಆಗ ನಾನು ಅಲ್ಲೇ ಅದಕ್ಕೆ ಸಹಿ ಮಾಡಿದ್ದೇನೆಂದರೆ ಸರಿ. ಬಂಗಾರದ ಆಭರಣಗಳನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಪಿ ಬಿ ಟಿ ಆರೋಪಿ ಪರ ವಕೀಲರಿಂದ**

**4.** ಚಾಸಾ.1 ನನಗೆ ಪರಿಚಯ. ನನಗೆ ಕನ್ನಡ ಓದಲು ಬರೆಯಲು ಅಷ್ಟು ಬರುವುದಿಲ್ಲಾ. ಚಾಸಾ.1 ನನಗೆ ಸಂಬಂಧೀಕರಾಗಬೇಕು. ನಾನು ಹೇಳಿ ಬರೆಸಿದ ಪಂಚನಾಮೆ ಆಗಿರುವುದಿಲ್ಲಾ. ಘಟನಾ ಸ್ಥಳದಿಂದ ನನ್ನ ಮನೆ ಅರ್ಧ ಕಿಮೀ ದೂರದಲ್ಲಿದೆ. ನಿಪಿ.3 ಮಾಡುವಾಗ 7 - 8 ಜನರು ಸೇರಿದ್ದರು. ನನಗೆ ಪಂಚನಾಗಲು ಯಾವುದೇ ನೋಟೀಸನ್ನು ನೀಡಿರುವುದಿಲ್ಲಾ. ಪಂಚನಾಮೆಯಲ್ಲಿ ಕಳ್ಳತನ ಆಗಿರುವುದರ ಬಗ್ಗೆ ಬರೆದಿದ್ದಾರೆ. ನಿಪಿ.3 ದಿನಾಂಕಃ 01.12.2008 ರಲ್ಲಿ ಪೋಲೀಸ ಠಾಣೆಯಲ್ಲಿ ಬರೆಯಲಾಯಿತು. ನಿಪಿ.4 , 02.12.2008 ರಂದು ಪೋಲೀಸ ಠಾಣೆಯಲ್ಲೆ ಬರೆಯಲಾಯಿತು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲಾ ಎಂದರೆ ಸರಿಯಲ್ಲ. ಚಾಸಾ.1 ನನ್ನ ಸಂಬಂಧೀಕರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**